ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

**ಸಿ ಸಿ ಸಂಖ್ಯೆ 1279 /2025**

ಚಾಸಾ 4 ಫ್ರಾಸಾ 4

| | | |
|---|---|---|
| ಸಾಕ್ಷಿಯ ಹೆಸರು | : | ಮಧು |
| ತಂದೆಯ ಹೆಸರು | : | ಕೆಂಪರಾಜು |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಉಪ ವಲಯ ಅರಣ್ಯಾಧಿಕಾರಿ |
| ವಾಸ ಸ್ಥಳ | : | ಸತ್ತೇಗಾಲ |

ಸಾಕ್ಷಿಯನ್ನು ದಿನಾಂಕಃ 09.07.2026 ರಂದು ಕರೆದು ಪ್ರಮಾಣಿಕರಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು 2023 ರ ಡಿಸೆಂಬರ್ ಇಂದ ಮಾರ್ಚ್ 2024ರವರಗೆ ಕೊತ್ತನೂರು ವಿಭಾಗದಲ್ಲಿ ಉಪ ವಲಯ ಅರಣ್ಯಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 29.02.2024 ರಂದು ನಾನು ಮತ್ತಿಪುರ, ಪ್ರಕಾಶ್ ಪಾಳ್ಯ ಕಡೆಯಲ್ಲಿ ಗಸ್ತು ಇರುವಾಗ ಸಂಜೆ 4.00 ಗಂಟೆ ಸಮಯದಲ್ಲಿ, ಚಾಸಾ 1ರವರು ದೂರವಾಣಿ ಕರೆ ಮಾಡಿ ತಮಗೆ ಬಂದ ಮಾಹಿತಿಯನ್ನು ನನಗೆ ತಿಳಿಸಿ ದಾಳಿಗೆ ಪಂಚರಾಗಲು ಕೋರಿದ್ದರು. ನಾನು ಸದರಿ ಸಂಗತಿಯನ್ನು ನನ್ನ ಮೇಲಾಧಿಕಾರಿಗೆ ತಿಳಿಸಿ ಅವರ ಅನುಮತಿ ಪಡೆದು, ಇಕ್ಕಡಹಳ್ಳಿ ಮತ್ತಿಪುರ ಗ್ರಾಮದ ನಡುವೆ ಇರುವ ಬೋಳಮ್ಮ ಬಸವೇಶ್ವರ ದೇವಸ್ಥಾನದ ಬಳಿ ಕಾಯುತ್ತಿದ್ದೆ. ಆಗ ಸಂಜೆ 4.40 ಗಂಟೆ ಸಮಯದಲ್ಲಿ ಚಾಸಾ 1ರವರ ಜೊತೆ ಪಂಚರಾದ ಚಾಸಾ 2 ಮತ್ತು ಚಾಸಾ 3 ಹಾಗೂ ಸಿಬ್ಬಂದಿಗಳಾದ ಚಾಸಾ 5 ಮತ್ತು ಚಾಸಾ 7ರವರು ಬಂದಿದ್ದರು. ಚಾಸಾ 1ರವರು ಮತ್ತೊಮ್ಮೆ ನನಗೆ ಸಂಗತಿ ತಿಳಿಸಿದ್ದರು. ಆ ನಂತರ ನಾವೆಲ್ಲರೂ ಇಕ್ಕಡಹಳ್ಳಿ ಗ್ರಾಮಕ್ಕೆ ತೆರಳುವ ಕಚ್ಚಾ ರಸ್ತೆಯ ಕಡಿಗುಡ್ಡ ಬಳಿ ವಾಹನ ನಿಲ್ಲಿಸಿ, ಚಾಸಾ 1ರವರಿಗೆ ಮಾಹಿತಿ ಇದ್ದ ಜಮೀನಿನ ಬಳಿಗೆ ಕಾಲ್ನಡಿಗೆಯಲ್ಲಿ ನಡೆದುಕೊಂಡು ಹೋಗುತ್ತಿದ್ದೆವು. ಸಮವಸ್ತ್ರದಲ್ಲಿದ್ದ ನಮ್ಮನ್ನೆಲ್ಲಾ ಗಮನಿಸಿ ಜಮೀನಿನಲ್ಲಿ ಇದ್ದ ಆಸಾಮಿ ಸ್ಥಳದಿಂದ ಓಡಿ ಹೋದರು. ಹಿಡಿಯಲು ಪ್ರಯತ್ನಿಸಿದ್ದು, ಸಾಧ್ಯವಾಗಿರುವುದಿಲ್ಲ. ಚಾಸಾ 1ರವರಿಗೆ ಇದ್ದ ಮಾಹಿತಿಯ ಅನುಸಾರ ಸ್ಥಳ ಪರಿಶೀಲನೆ ಮಾಡಲಾಗಿ ಅಲ್ಲಿ ಉತ್ತು ಹದ ಮಾಡಿದ್ದ ತೆಂಗಿನ ಮರಗಳ ಸಾಲು ಇದ್ದಲ್ಲಿ ಹನಿ ನೀರಾವರಿ ಪೈಪ್ ಗಳನ್ನು ಜೋಡಿಸಿ ಇಡಲಾಗಿತ್ತು. ಅಲ್ಲಿ ಒಂದು ನಾಡ ಬಂದೂಕು ಮತ್ತು ಬ್ಯಾಗ್ ಕಂಡು ಬಂದಿರುತ್ತದೆ.

ಸದರಿ ನಾಡ ಬಂದೂಕನ್ನು ಅಳತೆ ಮಾಡಿ ನೋಡಿರುತ್ತೇವೆ ಆದರೆ ಈಗ ಅದರ ಅಳತೆ ನನಗೆ ನೆನಪಿರುವುದಿಲ್ಲ. ಸದರಿ ಬ್ಯಾಗ್ ನಲ್ಲಿ ಮದ್ದಿನ ಪುಡಿ, ಸೀಸದ ತುಂಡುಗಳು ಹಾಗೂ ಸಣ್ಣ ಸಣ್ಣ ಬಾಲ್ಸ್ ಗಳು ಇತ್ತು. ನೂರರ ಮೇಲೆ ಬಾಲ್ ಗಳು ಇದ್ದವು ಆದರೆ ನಿಖರವಾಗಿ ನನಗೆ ಸಂಖ್ಯೆ ನೆನಪಿರುವುದಿಲ್ಲ. ಈ ಎಲ್ಲಾ ಮಾಲುಗಳು ಖಾಖಿ ಬಣ್ಣದ ಬಾಗಿನಲ್ಲಿ ಇತ್ತು. ಸದರಿ ಎಲ್ಲಾ ಮಾಲುಗಳನ್ನು ಚಾಸಾ 1ರವರು ಮಹಜರ್ ಕ್ರಮದ ಮೂಲಕ ತಮ್ಮ ವಶಕ್ಕೆ ಪಡೆದು, ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ಎಸ್ ಎಂಬ ಅಕ್ಷರದಿಂದ ಸೀಲು ಮಾಡಲಾಯಿತು. ಸದರಿ ಮಹಜರ್ ಗೆ ನಾನು ಸಹಿ ಮಾಡಿದ್ದೆ. ಸಾಕ್ಷಿಯು ನಿಪಿ-1 ರಲ್ಲಿ ತಮ್ಮ ಸಹಿಯನ್ನು

ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–1(ಡಿ) ಎಂದು ಗುರುತಿಸಲಾಯಿತು. ನಾನು ತನಿಖಾಧಿಕಾರಿ ಸಮಕ್ಷಮ ಹೇಳಿಕೆ ನೀಡಿದ್ದೆ. ನ್ಯಾಯಾಲಯದ ಸಮಕ್ಷಮ ಇರುವ ಆರೋಪಿ ಹಾಗೂ ಮುದ್ದೇಮಾಲು 1 ರಿಂದ 7ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ ಎಸ್ ಆರ್ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಸರ್ವೆ ನಂಬರ್ ಗೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಳಿಯಲ್ಲಿ ಭಾಗ ವಹಿಸಿಲ್ಲ ಎಂದರೆ ಸರಿಯಲ್ಲ. ನಿಪಿ–1 ನ್ನು ನನ್ನ ಸಮಕ್ಷಮ ಬರೆದಿಲ್ಲ ಠಾಣೆಯಲ್ಲಿ ಬರೆದು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಕಾರ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಮುದ್ದೇಮಾಲುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಕಾವ್ಯಶ್ರೀ.ಎಂ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ